ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಂಗಾತಿ....

ಸಂಪುಟ : 5 ಸಂಚಿಕೆ : 2 ಪುಟ : 8 ಖಾಸಗಿ ಪ್ರಸಾರಕ್ಕಾಗಿ ಮೇ – ಜೂನ್ 2010

# ಹುಷಾರ್. . .!!

## ಮಹಿಳಾ ಕಾರ್ಮಿಕರು ದೌರ್ಜನ್ಯ ಸಹಿಸುವುದಿಲ್ಲ!!

### ಕೆಲಸದ ಸ್ಥಳದಲ್ಲಿ ಮಹಿಳಾ ಕಾರ್ಮಿಕರ ಮೇಲಿನ ದೌರ್ಜನ್ಯದ ವಿರುದ್ಧದ ಆಂದೋಲನ

ಆತ್ಮೀಯರೇ,

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರ ಹಲವಾರು ಸಮಸ್ಯೆ ತೊಂದರೆಗಳನ್ನು ಗುರ್ತಿಸಿ ಅದರ ಪರಿಹಾರದ ನಿಟ್ಟಿನಲ್ಲಿ ಕೆಲಸಮಾಡುತ್ತಿರುವ 'ಮುನ್ನಡೆ'ಗೆ ಈಗ ಕೆಲಸದ ಸ್ಥಳದಲ್ಲಿ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯದ ವಿರುದ್ಧ ಆಂದೋಲನ ಹಮ್ಮಿಕೊಳ್ಳುವುದು ಅನಿವಾರ್ಯವಾಗಿದೆ. ಕಾರ್ಮಿಕರನ್ನು ಶೋಷಿಸುತ್ತಿರುವ ಶೋಷಕರಿಗೆ 'ಹುಷಾರ್!!' ಎಂಬ ಎಚ್ಚರಿಕೆಯೊಂದಿಗೆ ನಾವು ಇದನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ತಲುಪಿಸುವ ಅವಶ್ಯಕತೆ ಇಂದು ನಮ್ಮ ಮುಂದಿದೆ.

ಮಹಿಳೆ ಎಂದಾಕ್ಷಣ ದೌರ್ಜನ್ಯ ಎಂಬ ಪದವೂ ಜೊತೆಯಾಗಿಯೇ ಬರುತ್ತದೆ ಎನಿಸುತ್ತದೆ. ಅದು ಸಮಾಜದ ಯಾವ ಸ್ತರದಲ್ಲಿಯಾದರೂ ಆಗಬಹುದು. ಕುಟುಂಬ, ಕೆಲಸದ ಸ್ಥಳ, ರಸ್ತೆ, ಸಾರ್ವಜನಿಕ ಸ್ಥಳಗಳು ಹೀಗೇ ಎಲ್ಲಿಯಾದರೂ ಸರಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ಮಹಿಳೆ ಎಂಬ ಕಾರಣಕ್ಕಾಗಿಯೇ ದೌರ್ಜನ್ಯ ನಡೆದರೂ, ಕೆಲವೊಂದು ಬಾರಿ ಅಂತಸ್ತು, ಜಾತಿ, ವರ್ಗ, ಧರ್ಮವನ್ನಾಧರಿಸಿ ಈ ದೌರ್ಜನ್ಯದ ಸ್ವರೂಪ ವಿವಿಧ ಬಗೆಯಾಗಿರುತ್ತದೆ. ಇದು ಭಾರತದ ಪರಿಸ್ಥಿತಿ ಮಾತ್ರವಲ್ಲ ಪ್ರಪಂಚದಾದ್ಯಂತ ಮಹಿಳೆಯರು ಇಂದು ಇದೇ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯ ಸಾರ್ವತ್ರಿಕವಾಗಿದೆ ಹಾಗೂ ಅದನ್ನು ಮಾಮೂಲು ವಿಷಯವೆಂಬಂತೆ ಸಾಮಾನ್ಯೀಕರಿಸಲಾಗುತ್ತಿದೆ.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯಗಳು ಅತ್ಯಂತ ವ್ಯವಸ್ಥಿತವಾದದ್ದು. ಈ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಲು ಮಹಿಳೆಯರು ಅದರಲ್ಲಿಯೂ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಇಂದು ಸಾಧ್ಯವೇ ಇಲ್ಲ ಎಂಬಂತಹ ಪರಿಸ್ಥಿತಿ ಇದೆ. ಹಳ್ಳಿಗಳಲ್ಲಿ ನಿರುದ್ಯೋಗ ನಗರ ಜೀವನದ ಒತ್ತಡ, ಬಡತನದ ಬದುಕು ಇವೆಲ್ಲವೂ ದೌರ್ಜನ್ಯಗಳನ್ನು ಸುಮ್ಮನೆ ಸಹಿಸಿಕೊಳ್ಳುವಂತೆ ಮಾಡಿವೆ.

ಬೆಂಗಳೂರಿನಲ್ಲಿ, ಅತಿ ದೊಡ್ಡ ಮಟ್ಟದಲ್ಲಿ ಉದ್ಯೋಗ ಒದಗಿಸಿರುವುದು, ಗಾರ್ಮೆಂಟ್ಸ್ ಉದ್ಯಮ. ಸುಮಾರು ಐದು ಲಕ್ಷ ಕಾರ್ಮಿಕರು ಪ್ರತ್ಯಕ್ಷವಾಗಿ ದುಡಿಯುತ್ತಿರುವ ಈ ಉದ್ಯಮದಲ್ಲಿ ಶೇಕಡಾ 90 ಭಾಗ ಮಹಿಳೆಯರೇ ಇದ್ದಾರೆ. ಇತ್ತೀಚೆಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಅಸಹಜ ಸಾವು, ಕೊಲೆ ಇತ್ಯಾದಿಗಳು ಹೆಚ್ಚು ಹೆಚ್ಚು ಮಾಧ್ಯಮಗಳಲ್ಲಿ ವರದಿಗಳಾಗುತ್ತಿದೆ. ಪ್ರತಿಯೊಂದು ಅಪರಾಧ ಪ್ರಕರಣವೂ ಮುಖ್ಯವೇ ಆದರೂ, ಗಾರ್ಮೆಂಟ್ಸ್ ಕಾರ್ಮಿಕರ ಈ ರೀತಿಯ ಸಾವುಗಳನ್ನು ಗಂಭೀರವಾಗಿ ಪರಿಗಣಿಸಲೇ ಬೇಕಾಗಿದೆ.


ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಕಿರುಕುಳ, ದೌರ್ಜನ್ಯ, ಅಪಮಾನಗಳಿಗೂ ಕಾರ್ಮಿಕರ ಈ ರೀತಿಯ ಸಾವಿಗೂ ಹತ್ತಿರದ ಸಂಬಂಧವಿದೆ ಈಗಾಗಲೇ ಬೆಳಕಿಗೆ ಹಲವಾರು ಪ್ರಕರಣಗಳ ಉದಾಹರಣೆಯಿಂದ ತಿಳಿಯಬಹುದು

ದೌರ್ಜನ್ಯದಿಂದ, ನೊಂದ, ಅಪಮಾನಿತರಾದ ಚಿಕ್ಕ ವಯಸ್ಸಿನ ಮಹಿಳಾ ಕಾರ್ಮಿಕರು ತಮ್ಮ ಜೀವವನ್ನೇ ಅಂತ್ಯಗೊಳಿಸಿಕೊಳ್ಳುತ್ತಿದ್ದಾರೆ. ಆದರೆ ಎಷ್ಟೊಂದು ಪ್ರಕರಣಗಳೂ ಬೆಳಕಿಗೇ ಬರುತ್ತಿಲ್ಲ. ಹಲವಾರು ಬಾರಿ

*(3ನೇ ಪುಟಕ್ಕೆ)*



# ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಪ್ರೊಡಕ್ಷನ್ ಭೂತ: ಮಹಿಳಾ ಕಾರ್ಮಿಕರ ಮೇಲಾಗುತ್ತಿರುವ ದೌರ್ಜನ್ಯಕ್ಕೊಂದು ನೆಪ



"ನಾನು ಎಂಟು ವರ್ಷದ ಹಿಂದೆ ಕೆಲಸ ಮಾಡುವಾಗ ನಮ್ಮ ಫ್ಯಾಕ್ಟರಿಯಲ್ಲಿ 40 ರಿಂದ 50 ಪೀಸ್ ಪ್ರೊಡಕ್ಷನ್ ಅಷ್ಟೇ ಕೇಳ್ತಾ ಇದ್ದಿದ್ದು, ಈಗ ಅದೇ ಜನ, ಅದೇ ಮಿಶೀನು, ಅದೇ ಪೀಸು, 150 ರಿಂದ 160 ಕೇಳ್ತಾರೆ"

'ಪ್ರೊಡಕ್ಷನ್ ಕೊಡಲಿಲ್ಲ ಅಂದರೆ ಓ.ಸಿ ಮಾಡಿಸ್ತಾರೆ, ಬಾಯಿಗೆ ಬಂದ ಹಾಗೆ ಬೈಯ್ತಾರೆ',

'ನನ್ನ ಮುಂದೆ ಒಂದೇ ಕೆಲಸಕ್ಕೆ ಮೂರು ಜನರನ್ನ ಹಾಕಿದ್ದಾರೆ, ನಾನು ಮಾಡೋ ಕೆಲಸಕ್ಕೆ ಮಾತ್ರ ನಾನೊಬ್ಬಳೇ. ಅವರು ಮೂರೂ ಜನ ಕೊಡೋ ಪ್ರೊಡಕ್ಷನ್ ನಾನೊಬ್ಬಳೇ ಕೊಡಬೇಕು, ಸೂಪರ್‌ವೈಸರ್‌ಗೆ ಎದುರು ಮಾತಾಡಿದ್ದಕ್ಕೆ ಈ ರೀತಿ ಕಿರುಕುಳ ಕೊಡ್ತಾ ಇದ್ದಾರೆ"

'ನಾನಂತೂ ಅಕ್ಕ ಪಕ್ಕ ಯಾರಿದ್ದಾರೆ ಅಂತಲೂ ನೋಡಲ್ಲ, ಅಷ್ಟು ಪ್ರೊಡಕ್ಷನ್ ಟಾರ್ಚರ್, ಗಂಟೆ ಗಂಟೆಗೂ ಸೂಪರ್ ವೈಸರ್ ಬಂದು ಒತ್ತಡ ಹಾಕ್ತಾನೇ ಇರ್ತಾರೆ, ನೀರೂ ಕುಡಿಯಲ್ಲ, ಟಾಯ್ಲೆಟ್‌ಗೂ ಹೋಗಲ್ಲ, ಊಟದ ಟೈಮಲ್ಲೂ ಬೇಗ ಬಂದು ಕೆಲಸ ಮಾಡ್ತೀನಿ. ಸಂಜೆ ಬೇಗ ಮನೆಗೆ ಹೋಗಬಹುದು ಅಂತ. ಆದ್ರೆ ಅದು ಮಾತ್ರ ಸಾಧ್ಯವಿಲ್ಲ'

'ಏ ನಾಯಿ, ಬೇಗ ಪ್ರೊಡಕ್ಷನ್ ಕೊಡು ಇಲ್ಲದೇ ಇದ್ರೆ ಮನೆಗೆ ಹೋಗು, ಚೆನ್ನಾಗಿ ಡ್ರೆಸ್ ಮಾಡ್ಕೊಂದು ಬರೋಕಾಗುತ್ತೆ, ಪ್ರೊಡಕ್ಷನ್ ಕೊಡೊಕಾಗೊಲ್ವಾ? ಮಾತೆತ್ತಿದರೆ ನನಗೆ ಸಂಬಳ ಕಡಿಮೆ ಅಂತ ಹೇಳ್ತೀರಾ? ಪ್ರೊಡಕ್ಷನ್ ಮಾತ್ರ ಹೆಚ್ಚು ಕೊಡೋಕಾಗೊಲ್ಲಾ, ನೀವೆಲ್ಲಾ ರೋಡ್‌ನಲ್ಲಿ ನಿಂತ್ಕೊಳ್ಳೋದ್ದಕ್ಕೆ ಲಾಯಕ್ಕು" ದಿನಾ ಇಂತಹ ಬೈಗುಳ ತಿಂದೂ ತಿಂದೂ ನಮಗೆ ಸಾಕಾಗಿ ಹೋಗಿದೆ. ಫ್ಯಾಕ್ಟರಿಯಲ್ಲಿ ನಮಗೆ ಏನು ಸೌಕರ್ಯ ಕೊಡ್ತಾರೋ ಇಲ್ವೋ, ಆದ್ರೆ ಪ್ರೊಡಕ್ಷನ್ ಟಾರ್ಚರ್ ಮಾತ್ರ ದಿನಾ ಕೊಡ್ತಾರೆ'

ಇವೆಲ್ಲ, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಪ್ರೊಡಕ್ಷನ್ ಬಗ್ಗೆಯ ಅಳಲುಗಳು. "ಸರಿ.., ಕೆಲಸ ಮಾಡಬೇಕು ಅಂತಲೇ ಕಾರ್ಖಾನೆಗೆ ಹೋಗುತ್ತೀವಿ, ನಾವು ಯಾವತ್ತೂ ಮೈಗಳ್ಳತನ ಮಾಡಲ್ಲ, ಆದರೆ ನಮ್ಮ ಕೈಲಿ ಆಗದಷ್ಟು ಪ್ರೊಡಕ್ಷನ್ ಫಿಕ್ಸ್ ಮಾಡಿದರೆ ನಾವು ಮಾಡೋದಾದ್ರೂ ಹೇಗೆ?" ಎನ್ನುವ ಪ್ರಶ್ನೆ ಎಲ್ಲರದ್ದೂ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಪ್ರೊಡಕ್ಷನ್ ನಿಗದಿ ಮಾಡಲು ಯಾವುದೇ ಮಾನದಂಡವಿಲ್ಲ. ಬ್ರಾಂಡ್‌ಗಳಿಂದ ಬಂದ ಆರ್ಡರ್ ಎಷ್ಟು ದಿನದೊಳಗಾಗಿ ಹೋಗಬೇಕು ಎಂಬುದನ್ನು ಆಧರಿಸಿ, ಈ ಪ್ರೊಡಕ್ಷನ್ ನಿಗದಿ ಮಾಡಲಾಗುತ್ತದೆ. ಗಾರ್ಮೆಂಟ್ಸ್ ಉದ್ಯಮದಲ್ಲಿರುವ ವ್ಯಾಪಾರದ ಪೈಪೋಟಿಯಿಂದಾಗಿ ಕಾರ್ಮಿಕ ಮಹಿಳೆಯರು ಅತೀವ ಒತ್ತಡಕ್ಕೆ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ.

ಈ ಬಗ್ಗೆ ಸೂಪರ್‌ವೈಸರ್‌ಗಳನ್ನು ಮಾತನಾಡಿಸಿದರೆ, "ಅಯ್ಯೋ ನಾವು ಅವರಿಗೆ ಬೈಯೋದೇನು ಮಹಾ? ನಮಗೆ ನಮ್ಮ ಮೇಲಿನವರು ಎಂತೆಂತಹ ಮಾತುಗಳಿಂದ ಬೈಯುತ್ತಾರೆ ಗೊತ್ತಾ? ಇದೆಲ್ಲಾ ಕೆಲಸ ಮಾಡುವಾಗ ಮಾಮೂಲು' ಎಂದು ಹಾರಿಕೆಯ ಉತ್ತರ ಕೊಡುತ್ತಾರೆ. ಕಾರ್ಖಾನೆಗಳಲ್ಲಿ ಈ ಬೈಗುಳಗಳನ್ನು 'ಮಾಮೂಲು' ಎಂದು ಸಾಮಾನ್ಯೀಕರಿಸಲಾಗುತ್ತಿದೆ.

ವಿದೇಶೀ ಬ್ರಾಂಡ್‌ಗಳಿಗೆ ಉಡುಪುಗಳನ್ನು ಒದಗಿಸುವ ಬಗ್ಗೆ ಇರುವ ಸಮಯದ ಪೈಪೋಟಿಯಿಂದಾಗಿ ಪ್ರತಿಯೊಬ್ಬ ಮಾಲೀಕರು ಅದಕ್ಕೆ ಬೇರೇನೂ ಬದಲೀ ವ್ಯವಸ್ಥೆ ಮಾಡದೆ, ಇರುವ ಕಾರ್ಮಿಕರ ಮೇಲೆಯೇ ಒತ್ತಡ ಹಾಕುತ್ತಿದ್ದಾರೆ. ಪ್ರತಿಯೊಂದು ಮಾದರಿಯ ಬಟ್ಟೆಗೂ ಬೇರೆ ಬೇರೆ ಸಂಖ್ಯೆಯ ಪ್ರೊಡಕ್ಷನ್‌ಗಳು ನಿಗದಿಯಾಗುತ್ತವೆ. ಇದನ್ನು ನಿಗದಿ ಮಾಡುವವರು ಕಾರ್ಖಾನೆಯಲ್ಲಿರುವ 'ಐಡಿ'(ಇಂಡಸ್ಟ್ರಿಯಲ್ ಇಂಜಿನಿಯರ್)ಗಳು. ಬೆಳಿಗ್ಗೆ ಬಂದ ತಕ್ಷಣ ಆರೋಗ್ಯವಾಗಿರುವ ತುಂಬಾ ಉತ್ಸಾಹೀ ಯುವಕಾರ್ಮಿಕರೊಬ್ಬರಿಂದ ಮೊದಲು ಪ್ರೊಡಕ್ಷನ್ ಸಂಖ್ಯೆ ಆಧರಿಸಿ, ಅದನ್ನು ಎಲ್ಲರಿಗೂ ನಿಗದಿ ಪಡಿಸುತ್ತಾರೆ ಎಂದು ಮಹಿಳಾ ಕಾರ್ಮಿಕರು ಹೇಳುತ್ತಾರೆ. ಪ್ರೊಡಕ್ಷನ್ ನಿಗದಿ ಪಡಿಸಲು ಯಾವುದೇ ನಿಗದಿತ ಮಾನದಂಡವಿಲ್ಲ. ಒಟ್ಟಿನಲ್ಲಿ ಅವರು ಕೊಟ್ಟದ್ದೇ ಸಂಖ್ಯೆ. ಗಂಟೆಗೆ ಇಷ್ಟು ಪ್ರೊಡಕ್ಷನ್ ಬರಬೇಕು ಎಂದರೆ ಎಷ್ಟೇ ಕಷ್ಟವಾದರೂ ಬರಬೇಕು. ಗರ್ಭಿಣಿ ಕಾರ್ಮಿಕರಿಗೂ ಈ ಸಂಖ್ಯೆಯಿಂದ ವಿನಾಯತಿ ಇರುವುದಿಲ್ಲ.

ಇದರಿಂದ ಪ್ರಾರಂಭವಾಗುತ್ತದೆ ಕಾರ್ಮಿಕರ ಗೋಳು. ಪ್ರೊಡಕ್ಷನ್ ನೆಪವಾಗಿಟ್ಟುಕೊಂಡು ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುವುದು ಆಡಳಿತವರ್ಗದವರ ಒಂದು ಅಭ್ಯಾಸವಾಗಿದೆ.

- ಪ್ರೊಡಕ್ಷನ್ ಕೊಡಲಿಲ್ಲವೆಂದು ಕೆಲಸದಿಂದ ತೆಗೆದುಹಾಕುವುದು
- ಪ್ರೊಡಕ್ಷನ್ ಬೇಗ ಕೊಡುವಂತೆ ಅವಾಚ್ಯ ಶಬ್ದಗಳಿಂದ ಬೈಯುವುದು,
- ಎಂಟು ಗಂಟೆಯಲ್ಲಿ ಹೇಳಿದಷ್ಟು ಪ್ರೊಡಕ್ಷನ್ ಕೊಡಲಿಲ್ಲವೆಂದರೆ, ಅದು ಮುಗಿಯುವವರೆಗೂ ಹೆಚ್ಚುವರಿ ಕೆಲಸ ಮಾಡಿಸುವುದು, ಇದಕ್ಕೆ ಯಾವುದೇ ಹೆಚ್ಚುವರಿ ಭತ್ಯೆ ಇರುವುದಿಲ್ಲ. (ಓ.ಸಿ)
- ಮಾಡಿದ ಕೆಲಸ ಸರಿಯಿಲ್ಲವೆಂದು ಬಟ್ಟೆಯನ್ನೇ ಮುಖಕ್ಕೆ ಎಸೆಯುವುದು
- ಪ್ರೊಡಕ್ಷನ್ ನೆಪ ಹೇಳಿ ಕಾರ್ಮಿಕರ ರಜೆ ನಿರಾಕರಿಸುವುದು



Scanned with OKEN Scanner

- ತುರ್ತು ಸಂದರ್ಭದಲ್ಲಿ ರಜೆ ಹಾಕಿದರೆ, ಅವರ ಜಾಗದಲ್ಲಿ ಬೇರೆಯವರನ್ನು ಕೂರಿಸಿ, ಅವರಿಗೆ ಮತ್ತೊಂದು ವಾರ ಬಿಟ್ಟು ಬರುವಂತೆ ತಾಕೀತು ಮಾಡುವುದು.
- ತಮ್ಮ ಮಾತಿಗೆ ಎದುರಾಡಿದ ಮಹಿಳಾ ಕಾರ್ಮಿಕರಿಗೆ ಬೇಕಂತಲೇ ಹೆಚ್ಚು ಪ್ರೊಡಕ್ಷನ್ ನಿಗದಿ ಪಡಿಸುವುದು, ಅವರ ಕೆಲಸದಲ್ಲಿ ಇಲ್ಲದ ತಪ್ಪು ಕಂಡು ಹುಡುಕುವುದು.
- ಇಂಥವರು ಪ್ರೊಡಕ್ಷನ್ ಕೊಡುತ್ತಿಲ್ಲ ಎಂದು ಮೈಕ್‌ನಲ್ಲಿ ಅವರ ಹೆಸರು ಕೂಗಿ ಹೇಳಿ ಅವಮಾನ ಮಾಡುವುದು
- ಪ್ರೊಡಕ್ಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದರೆ, ಅವರನ್ನು ಕೆಲಸ ಕೊಡದೆ ಕೂರಿಸಿ ಅವಮಾನಿಸುವುದು.

ಹೀಗೇ ಕಾರ್ಖಾನೆಯಲ್ಲಿ ಕಾರ್ಮಿಕರು ಪ್ರತೀ ಕ್ಷಣ ಅನುಭವಿಸುವ ದೌರ್ಜನ್ಯಕ್ಕೂ, ಪ್ರೊಡಕ್ಷನ್‌ಗೂ ತುಂಬಾ ಹತ್ತಿರದ ಸಂಬಂಧವಿದೆ ಎಂದು ಮೇಲ್ನೋಟಕ್ಕೇ ಕಾಣಿಸುತ್ತದೆ. ಕೆಲಸದ ಸ್ಥಳದಲ್ಲಿ ಆಗುವ ಕಿರುಕುಳಕ್ಕೆ ಮಹಿಳೆ ಎಂಬ ಅಂಶವೇ ಕಾರಣ ವಾದರೂ, ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಅದಕ್ಕೆ ಪ್ರೊಡಕ್ಷನ್ ಅನ್ನು ಸಾಧನವಾಗಿರಿಸಿಕೊಳ್ಳಲಾಗುತ್ತಿದೆ.

ಇದಕ್ಕೆ ಏನು ಪರಿಹಾರ? ಪ್ರೊಡಕ್ಷನ್ ನಿಗದಿ ಮಾಡುವುದಕ್ಕೆ ವೈಜ್ಞಾನಿಕ ಮಾನದಂಡ ನಿಗದಿ ಪಡಿಸಬೇಕು. ಒಬ್ಬ ಸಾಮಾನ್ಯ ಮಹಿಳೆ ತನ್ನ ಗರಿಷ್ಠ ಮಿತಿ ಬಳಸಿ ಮಾಡಬಹುದಾದಂತಹ ಪ್ರೊಡಕ್ಷನ್ (ಮಾದರಿಯಿಂದ ಮಾದರಿಗೆ ಬದಲಾಗಬಹ್ದುದು) ಅನ್ನೇ ನಿಗದಿ ಗೊಳಿಸಬೇಕು.

ಮಹಿಳೆಯರ ಮೇಲೆ ಈ ರೀತಿಯ ದೌರ್ಜನ್ಯಕ್ಕೆ ಮೂಲಭೂತ ಕಾರಣವೆಂದರೆ ಸಾವಿರಾರು ವರ್ಷಗಳಿಂದ ಅವಳನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ನೋಡುತ್ತಿರುವ ಪುರುಷ ಸಮಾಜ. ಕಾರ್ಖಾನೆಯ ಸ್ಥಳಗಳಲ್ಲಿ ಪ್ರೊಡಕ್ಷನ್ ನಿಗದಿ ಮಾಡುವ ವಿಚಾರದಲ್ಲಿ ಸಮೂಹಿಕ ಚೌಕಾಸಿಯೇ ಸರಿಯಾದ ಸಾಧನ. ಕಾರ್ಮಿಕ ಪ್ರತಿನಿಧಿ ಗಳು ಹಾಗೂ ಆಡಳಿತವರ್ಗದ ನಡುವೆ ಪರಸ್ಪರ ಮಾತುಕತೆ ಯೊಂದಿಗೆ ಪ್ರೊಡಕ್ಷನ್ ಅನ್ನು ನಿಗದಿ ಮಾಡುವುದೊಂದೆ ಈ ಪ್ರೊಡಕ್ಷನ್ ಸಮಸ್ಯೆಗೆ ಕಾಯಂ ಪರಿಹಾರವೆನುಸುತ್ತದೆ.

ಈ ಪ್ರಕ್ರಿಯೆ ನಡೆಯಲು ಕಾರ್ಖಾನೆಯಲ್ಲಿ ಯೂನಿಯನ್ ಅಸ್ತಿತ್ವದಲ್ಲಿರಬೇಕು. ಜೊತೆಗೆ ಕೆಲಸದ ಸ್ಥಳದ ಸಮಿತಿಗಳು (Work place committes) ಸಮರ್ಥವಾಗಿ ಕೆಲಸ ನಿರ್ವಹಿಸಬೇಕು. ಕಾರ್ಖಾನೆಯಲ್ಲಿ ಕಾರ್ಮಿಕರು ಸಂಘಟಿತರಾದರೆ, ಈ ಪ್ರೊಡಕ್ಷನ್ ಟಾರ್ಚರ್ ಎಂಬ ಭೂತವನ್ನು ಹಿಮ್ಮೆಟ್ಟಿಸಬಹುದು. □

## ಹುಷಾರ್. . . .!!!!

### ಮಹಿಳಾ ಕಾರ್ಮಿಕರು ದೌರ್ಜನ್ಯ ಸಹಿಸುವುದಿಲ್ಲ!!! *(1ನೇ ಪುಟದಿಂದ)*

ಕಾರ್ಮಿಕರು "ಇವರು ಕೊಡೋ ಕಾಟಕ್ಕೆ, ಮಕ್ಕಳನ್ನ ಸಾಯಿಸಿ, ನಾವು ನೇಣು ಹಾಕ್ಕೊಂಡು ಬಿಡೋಣ ಅನ್ನಿಸ್ತಾ ಇದೆ" ಎಂದು ಮುನ್ನಡೆಯ ಕಾರ್ಯಕರ್ತ ರೊಂದಿಗೆ ಪ್ರತಿಕ್ರಿಯಿಸಿದ ಉದಾಹರಣೆಯೂ ಇದೆ.

ಕಾರ್ಖಾನೆಗಳಲ್ಲಿ ಪುರುಷ ಮೇಲಾಧಿಕಾರಿಗಳು ಬೈದು ಅವಮಾನಿಸಿದರು ಎಂಬ ಕಾರಣಕ್ಕಾಗಿ ಜೀವ ಕಳೆದುಕೊಂಡ 'ಅಮ್ಮು' ಅಥವಾ 'ರೇಣುಕಾ'ಳ ಪರಿಸ್ಥಿತಿಯನ್ನು ಗಮನಿಸಿದರೆ ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರು ಎಷ್ಟು ಒತ್ತಡವನ್ನು ಅನುಭವಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಜೀವನ ನಿರ್ವಹಣೆಗೆ ಈ ಉದ್ಯೋಗವನ್ನೇ ಅವಲಂಬಿಸಿ, ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುವ ಈ ಮಹಿಳೆಯರು ಸ್ವಾಭಾವಿಕವಾಗಿಯೇ ಮಾನಸಿಕ ಒತ್ತಡದಲ್ಲಿರುತ್ತಾರೆ. ಆದರೆ ಕಾರ್ಖಾನೆಗಳಲ್ಲಿ, ಅವೈಜ್ಞಾನಿಕ ಪದ್ಧತಿಯ ಪ್ರೊಡಕ್ಷನ್ ಟಾರ್ಗೆಟ್, ಪುರುಷ ಸೂಪರ್‌ವೈಸರ್‌ಗಳ ಕೆಟ್ಟ ಬೈಗುಳ, ಅಪಮಾನ ಎಲ್ಲವೂ ಅವರಲ್ಲಿ ಮತ್ತಷ್ಟು ಒತ್ತಡ ತುಂಬುತ್ತವೆ.

ಕಾರ್ಖಾನೆಯಲ್ಲಿ ಸರಿಯಾದ ಕಾರ್ಮಿಕ ಕಾನೂನುಗಳನ್ನು ಪಾಲಿಸದಿರುವುದು, ಹೆಚ್ಚಿನ ಹೊತ್ತು ದುಡಿಸಿಕೊಳ್ಳುವುದು, ಎಲ್ಲರ ಮುಂದೆ ಕಾರ್ಮಿಕರಿಗೆ ಅವಮಾನ ಮಾಡುವುದು, ಇವೆಲ್ಲವೂ ಕಾನೂನು ಬಾಹಿರ. ಈ ರೀತಿಯ ಘಟನೆಗಳು ಕಾರ್ಖಾನೆಯಲ್ಲಿ ಅಥವಾ ಹೊರಗೆ ಎಲ್ಲಿ ಸಂಭವಿಸಿದರೂ ತೆರೆಯ ಮರೆಯಲ್ಲಿಯೇ ಉಳಿದು ಬಿಡುತ್ತಿವೆ. ತಮ್ಮ ಕಾರ್ಖಾನೆಯ ಕಾರ್ಮಿಕರೊಬ್ಬರು ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ತೆಗೆದುಕೊಂಡರೆಂದರೆ, ಕಾರ್ಖಾನೆಯ ಮಾಲೀಕರು ಕನಿಷ್ಠ ಮಾನವೀಯ ನೆಲೆಯಲ್ಲಿಯಾದರೂ ಅದರ ಹೊಣೆಯ ಪಾಲನ್ನು ಹೊತ್ತುಕೊಂಡು, ಮುಂದೆ ಆ ರೀತಿ ನಡೆಯದಂತೆ ನೋಡಿಕೊಳ್ಳಬೇಕಾಗಿದೆ. ಆ ಕಾರ್ಮಿಕರಿಗೆ ಇರುವ ಸಮಸ್ಯೆಯನ್ನು ಹಾಗೂ ಅದರ ಹಿನ್ನೆಲೆಯನ್ನು ಕಾರ್ಮಿಕ ಇಲಾಖೆಗಳು, ಸರ್ಕಾರ, ಹಾಗೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಲೇಬೇಕಾಗುತ್ತದೆ

ಈ ರೀತಿಯ ಆತ್ಮಹತ್ಯೆಗೆ ಯತ್ನಿಸುವವರು ಹಾಗೂ ಅಸಹಜ ರೀತಿಯಲ್ಲಿ ಸಾವನ್ನಪ್ಪುತ್ತಿರುವವರು ಹೆಚ್ಚಿನ ಮಂದಿ 18 ರಿಂದ 25ರ ಒಳಗಿನ ಹೆಣ್ಣುಮಕ್ಕಳು. ಮುಗ್ಧ ಯುವತಿಯರು ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕೆ ಜೀವ ಕಳೆದು ಕೊಳ್ಳದಂತೆ ತಡೆಯುವುದು 'ಮುನ್ನಡೆ'ಯ ಮುಂದಿರುವ ಸವಾಲಾಗಿದೆ. ಇದಲ್ಲದೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಕಾರ್ಖಾನೆಯ ಒಳಗೆ ಹಾಗೂ ಹೊರಗೆ ಸೂಕ್ತ ಭದ್ರತೆಯನ್ನು ಒದಗಿಸುವಂತಹ ವ್ಯವಸ್ಥೆಯನ್ನು ಸೃಷ್ಟಿಸುವುದೂ ಸಹ 'ಮುನ್ನಡೆ'ಯ ಹೊಣೆಯಾಗಿದೆ.

ಸಮಾಜದ ಎಲ್ಲ ವರ್ಗದ ಗಮನವನ್ನು ಇದರೆಡೆಗೆ ಸೆಳೆದು, ಈ ಉದ್ಯಮದ ಪ್ರಮುಖ ಪಾಲುದಾರರಾದ, ಮಾಲೀಕರು, ಸರ್ಕಾರ, ಅಂತಾರಾಷ್ಟ್ರೀಯ ಬ್ರಾಂಡ್ ಗಳು, ಕಾರ್ಮಿಕ ಸಂಘಟನೆಗಳು, ಗ್ರಾಹಕರು ಎಲ್ಲರನ್ನೂ ಒಳಗೊಂಡು ಮಹಿಳಾ ಕಾರ್ಮಿಕರ ದೌರ್ಜನ್ಯದ ವಿರುದ್ಧ ಆಂದೋಲನ ನಡೆಸುವ ಆಶಯ, ಅನಿವಾರ್ಯತೆ ನಮ್ಮ ಮುಂದಿದೆ. ಬದಲಾವಣೆ ಎಂಬುದು ಸಮಗ್ರ ವ್ಯವಸ್ಥೆಯಲ್ಲಿ ಬರಬೇಕು ಎಂಬುದು ಮುನ್ನಡೆಯ ನಂಬಿಕೆಯಾಗಿದೆ. □

**ಜೋಕೆ..!**

ನೇರ ನಡೆಯ ಹೆಜ್ಜೆಗಳು ನಮ್ಮವು...
ಸಿಗದಿರಿ ಮುಳ್ಳುಗಂಟೆಗಳಾಗಿ...
ಮೆಟ್ಟಿ ಮುನ್ನಡೆದೇವು ನಾವು
ಬದಿಗೊತ್ತಿ ಎಲ್ಲ ಲಜ್ಜೆ...

ತರಚಿರಿ ಚುಚ್ಚಿರಿ ಮುಳ್ಳುಗಳಾಗಿ
ಚಿವುಟಲಾರೆವು ನಿಮ್ಮ...
ಕಿತ್ತೊಗೆದು ಬುಡಸಹಿತ
ಮುಂಬರಿಯುವುದು ಈ ಹೆಜ್ಜೆ...

■ *ದೀಪಾ ಗಿರೀಶ್*

# ಗಾರ್ಮೆಂಟ್ಸ್ ಉದ್ಯೋಗಿ ರೂಪಾ ಸಾವು: ತನಿಖೆಗೆ ಆಗ್ರಹಿಸಿ ಪ್ರತಿಭಟನೆ ಮತ್ತು ಶ್ರದ್ಧಾಂಜಲಿ ಸಭೆ






ಮಾರ್ಚ್ 20ರಂದು ಬೆಂಗಳೂರಿನ ತುಮಕೂರು ರಸ್ತೆಯ ಗೋಲ್ಡನ್ ಸೀಮ್ಸ್ ಕಾರ್ಖಾನೆಯ ಉದ್ಯೋಗಿ, 17ರ ಹರೆಯದ ರೂಪಾ ಎಂಬ ಅಮಾಯಕ ಯುವತಿಯನ್ನು ನಿಗೂಢ ರೀತಿಯಲ್ಲಿ ಸುಟ್ಟು ಹತ್ಯೆಮಾಡಲಾಗಿದ್ದು, ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣವನ್ನು ಐಪಿಸಿ ಸೆಕ್ಷನ್ 201 ಮತ್ತು 302ರ ಅಡಿಯಲ್ಲಿ 'ಕೊಲೆ' ಎಂದು ದಾಖಲಿಸಿಕೊಂಡಿದ್ದರೂ ಸಹ ಯಾರನ್ನೂ ಬಂಧಿಸಲಾಗಿಲ್ಲ.

ರೂಪಾಳ ಸಾವಿನ ತನಿಖೆಯನ್ನು ಚುರುಕುಗೊಳಿಸಿ, ದುಷ್ಕರ್ಮಿಗಳನ್ನು ಬಂಧಿಸಲು ಪೊಲೀಸರನ್ನು ಆಗ್ರಹಿಸಿ, 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'ಯು ಏಪ್ರಿಲ್ 16ರಂದು ಬೆಂಗಳೂರಿನ ಟೌನ್ ಹಾಲ್ ಮುಂಭಾಗ ಪ್ರತಿಭಟನೆ ನಡೆಸಿತು. ಇದೇ ಸಂದರ್ಭದಲ್ಲಿ ರೂಪಾಳ ಸಾವಿಗೆ ಮೇಣದ ಬತ್ತಿ ಬೆಳಗುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಪ್ರತಿಭಟನಾ ಸಭೆಯಲ್ಲಿ ಸುಮಾರು 300ಕ್ಕೂ ಹೆಚ್ಚು ಗಾರ್ಮೆಂಟ್ಸ್ ಕಾರ್ಮಿಕರು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿ, ಕಾರ್ಖಾನೆಯಲ್ಲಿ ಹಾಗೂ ಕಾರ್ಖಾನೆಯ ಹೊರಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಕಾರ್ಖಾನೆಗಳಲ್ಲಿ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದನ್ನು ತಡೆಗಟ್ಟಬೇಕು ಎಂದು ಕರ್ನಾಟಕ ಸರ್ಕಾರ, ಬೆಂಗಳೂರು ಪೊಲೀಸರು, ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಹಾಗೂ ಕರ್ನಾಟಕ ಮಕ್ಕಳ ಹಕ್ಕು ರಕ್ಷಣಾ ಆಯೋಗವನ್ನು ಒತ್ತಾಯಿಸಲಾಯಿತು. □

# ಮೇ ದಿನಾಚರಣೆಯಂದು ಸಂಭ್ರಮದ ಕಾರ್ಮಿಕ ಜಾಗೃತಿ ಜಾಥಾ



ಮೇ ದಿನಾಚರಣೆ ಕಾರ್ಮಿಕರ ಪಾಲಿಗೆ ಕೇವಲ ಒಂದು ರಜೆದಿನವಾಗಿ ಕಳೆದುಹೋಗಬಾರದು. ಅದು ಕಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ದಿನ.

ಆದ್ದರಿಂದಲೇ ಕಾರ್ಮಿಕ ಶಕ್ತಿಯನ್ನು ಒಗ್ಗೂಡಿಸುವ ಸಲುವಾಗಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್(GATWU) ಈ ವರ್ಷ 'ಗಾರ್ಮೆಂಟ್ಸ್ ಕಾರ್ಮಿಕ ಜಾಗೃತಿ ಜಾಥಾ'ವನ್ನು ಹಮ್ಮಿಕೊಂಡಿತ್ತು. ಜಾಥಾದ ಮೂಲಕ ಸಂಘಟನೆಯ ಪರಿಕಲ್ಪನೆಯ ಅರಿವೇ ಇಲ್ಲದ, ಅರಿವಿದ್ದೂ ಸಂಘಟನೆಗೆ ಮುಂದಾಗದ ಕಾರ್ಮಿಕರಿಗೆ ಜಾಗೃತಿ ಮೂಡಿಸುವ ಮಹತ್ತರ ಉದ್ದೇಶದೊಂದಿಗೆ ಈ ಜಾಥಾವನ್ನು ರೂಪಿಸಲಾಗಿತ್ತು. ಜಾಥಾವು ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿಯಿಂದ ಪ್ರಾರಂಭಗೊಂಡು, ಪೀಣ್ಯಾ ಪ್ರದೇಶದ ಲಗ್ಗೆರೆ, ರಾಜಗೋಪಾಲ ನಗರ, ಪೀಣ್ಯಾ 2ನೇ ಹಂತದ ಮೂಲಕ ಹಾದು, ನಂತರ ಹೆಗ್ಗನಳ್ಳಿಯಲ್ಲಿ ಮುಕ್ತಾಯಗೊಂಡಿತು.




ಸುಂದರವಾಗಿ ಅಲಂಕರಿಸಲಾಗಿದ್ದ ತೆರೆದ ವಾಹನದಲ್ಲಿ ಸುಮಾರು 50ಕ್ಕೂ ಹೆಚ್ಚು ಕಾರ್ಮಿಕ ಮುಖಂಡರುಗಳು ಘೋಷಣೆಗಳನ್ನು ಕೂಗುತ್ತಾ, ಜೈಕಾರ ಹಾಕುತ್ತಾ, ಹೋರಾಟದ ಹಾಡುಗಳನ್ನು ಹಾಡುತ್ತಾ ಜಾಥಾದ ಮೆರಗು ಹೆಚ್ಚಿಸಿದರು. ಲಗ್ಗೆರೆ, ರಾಜಗೋಪಾಲನಗರ ಮತ್ತು ಪೀಣ್ಯಾ 2ನೇ ಹಂತದಲ್ಲಿ ಕ್ರಮವಾಗಿ ಬಹಿರಂಗ ಸಭೆಗಳನ್ನು ನಡೆಸಿ, ಕಾರ್ಮಿಕ ಮುಖಂಡರುಗಳು ಮೇ ದಿನಾಚರಣೆಯ ಮಹತ್ವ, ಹಾಗೂ ಕನಿಷ್ಠ ವೇತನ ಹೆಚ್ಚಳದ ಬಗ್ಗೆ ಮಾತನಾಡಿದರು. ನಂತರ ಅವುಗಳಿಗೆ ಸಂಬಂಧಿಸಿದ ಕರಪತ್ರವನ್ನು ಹಂಚಲಾಯಿತು.

ನಂತರ ಹೆಗ್ಗನಳ್ಳಿಯಲ್ಲಿ ಏರ್ಪಡಿಸಲಾಗಿದ್ದ ಪುಟ್ಟ ಸಮಾರಂಭದಲ್ಲಿ 'ದುಡಿಯೋರ ಹೋರಾಟ' ಪತ್ರಿಕೆಯ ಜಗದೀಶ್, ಸಿವಿಡೆಪ್‌ನ ಗೋಪಿನಾಥ್ ಹಾಗೂ GATWUನ ಉಪಾಧ್ಯಕ್ಷರಾದ ಜಯರಾಮ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ಸಿಹಿ ವಿತರಣೆಯ ಮೂಲಕ ಅರ್ಥಪೂರ್ಣ 'ಗಾರ್ಮೆಂಟ್ಸ್ ಕಾರ್ಮಿಕರ ಜಾಗೃತಿ ಜಾಥಾ'ವನ್ನು ಮುಕ್ತಾಯಗೊಳಿಸಲಾಯ್ತು. □



Scanned with OKEN Scanner

# ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನದ ಶತಮಾನೋತ್ಸವ
# ಅಸಂಘಟಿತ ಮಹಿಳಾ ಕಾರ್ಮಿಕರ 'ಗೌರವ ಮತ್ತು ಸುರಕ್ಷೆ'ಗಾಗಿ ಹಕ್ಕೊತ್ತಾಯ




## ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ಶತಮಾನೋತ್ಸವ ದಿನಾಚರಣೆ : ವರದಿ

ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನದ ಅಂಗವಾಗಿ, ಮುನ್ನಡೆಯು ಬೆಂಗಳೂರಿನ ಇತರೆ 18 ಸಂಘಟನೆಗಳ ಜೊತೆಗೂಡಿ ರಚಿಸಿಕೊಂಡಿರುವ 'ಮಹಿಳಾ ಹೋರಾಟ ಒಕ್ಕೂಟ'ದ ಮೂಲಕ ಮಾರ್ಚಿ 7ನೇ ತಾರೀಖಿನಂದು ಬೆಳಿಗ್ಗೆ 10.30ಕ್ಕೆ ಮಹಾತ್ಮಾ ಗಾಂಧಿ ರಸ್ತೆಯ ಗಾಂಧಿ ಪ್ರತಿಮೆ ಬಳಿ ಬೃಹತ್ ಪ್ರತಿಭಟನೆ ನಡೆಸಲಾಯ್ತು. ಪ್ರತಿಭಟನೆಯಲ್ಲಿ ವಿವಿಧ ಸಂಘ-ಸಂಸ್ಥೆಗಳ ಮುಖಂಡರುಗಳು, ಕಾರ್ಯಕರ್ತರು ಮತ್ತು ಸುಮಾರು 400ಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರು ಭಾಗವಹಿಸಿದ್ದರು. ಪ್ರತಿಭಟನೆಯಲ್ಲಿ ಮುಖ್ಯವಾಗಿ ಕೆಲಸದ ಸ್ಥಳದಲ್ಲಿ 'ಗೌರವ ಮತ್ತು ಸುರಕ್ಷೆ'ಗಾಗಿ ಹಕ್ಕೊತ್ತಾಯವನ್ನು ಮಂಡಿಸಲಾಯ್ತು. ವಿವಿಧ ವಲಯಗಳ ಅಸಂಘಟಿತ ಕಾರ್ಮಿಕ ಮುಖಂಡರುಗಳು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು

ನಂತರ ಪ್ರತಿಭಟನಾಕಾರರೆಲ್ಲರೂ ಕಬ್ಬನ್ ಪಾರ್ಕ್ ಆವರಣದಲ್ಲಿರುವ ಎನ್.ಜಿ.ಒ ಹಾಲ್‌ನಲ್ಲಿ ಸಭೆ ಸೇರಿದರು. ಸಭೆಯಲ್ಲಿ ನಂತರ, ಕೃಷಿ ಕೂಲಿ ಕಾರ್ಮಿಕರಾದ ಸಂಪಂಗಮ್ಮ, ಗಾರ್ಮೆಂಟ್ ಕಾರ್ಮಿಕರಾದ ವೆಂಕಟಲಕ್ಷ್ಮಿ, ಗುತ್ತಿಗೆ ಪೌರ ಕಾರ್ಮಿಕರಾದ ಜಯಮ್ಮ, ಕಟ್ಟಡ ಕಾರ್ಮಿಕರಾದ ಗಾಯತ್ರಿಯವರು, ಲೈಂಗಿಕ ಕಾರ್ಯಕರ್ತರ ಪ್ರತಿನಿಧಿಯಾಗಿ ವೀಣಾ ಇವರುಗಳು ತಮ್ಮ ಕ್ಷೇತ್ರದಲ್ಲಿನ ಮಹಿಳಾ ಕಾರ್ಮಿಕರ ಅನುಭವ ಗಳನ್ನು ಸಭೆಗೆ ತೆರೆದಿಟ್ಟರು.

ಸಭೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ, ಕಮ್ಯುನಿಸ್ಟ್ ವಾದಿ, ಹೊಸತು ಪತ್ರಿಕೆ ಸಂಪಾದಕರಾದ ಜಿ. ರಾಮಕೃಷ್ಣ ಅವರು ಮಾತನಾಡಿ, ಇಂದು ಅಸಂಘಟಿತ ಕಾರ್ಮಿಕರೆಂದು ಕರೆಸಿಕೊಳ್ಳುತ್ತಿರುವ ನಾವೂ ಮುಂದೊಂದು ದಿನ ಸಂಘಟಿತರಾಗಿಯೇ ತೀರುತ್ತೇವೆ ಎನ್ನುವ ದೃಢ ಸಂಕಲ್ಪ ಮಾಡಬೇಕಿದೆ. ಸರ್ಕಾರದ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯು ಕೂಡಾ ಕಾರ್ಮಿಕ ವಿರೋಧಿಗಳಾಗಿರುವುದು ವಿಪರ್ಯಾಸದ ಸಂಗತಿ. ಹಿಂದಿನ ಹೋರಾಟಗಳು ಇಂದಿನ ಹೋರಾಟಕ್ಕೆ ಸ್ಫೂರ್ತಿಯಾದಂತೆ, ಇಂದಿನ ಹೋರಾಟಗಳು ಇತಿಹಾಸ ನಿರ್ಮಿಸಿ-ನಾಳಿನ ಹೋರಾಟಕ್ಕೆ ದಾರಿದೀಪವಾಗಬೇಕು ಎಂದು ಅವರು ಆಶಿಸಿದರು.



ನಂತರ, ಕಾರ್ಮಿಕ ನಾಯಕರಾದ ಬಾಲನ್‌ರವರು ಮಾತನಾಡಿ, ಇಂದು ಆಚರಿಸುತ್ತಿರುವ ಮಹಿಳಾ ದಿನಾಚರಣೆಯು 1906ರಿಂದ 1909ರವರೆಗೆ ಅನೇಕ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ನಡೆಸಿದ ಹೋರಾಟದಿಂದಲೇ ಹುಟ್ಟಿತು. ನಿಮ್ಮ ಹೋರಾಟ ಸ್ತ್ರೀ ವಿಮೋಚನೆಗೆ ದಾರಿಯಾಗಬೇಕು ಎಂದರು.

ವಿಮೋಚನಾ ಸಂಸ್ಥೆಯ ಶಕುನ್ ಮಾತನಾಡಿ, ಮಹಿಳೆಯರಲ್ಲಿ 90ಕ್ಕೂ ಹೆಚ್ಚಿನ ಪಾಲು ದುಡಿಯುವ ಕಾರ್ಮಿಕರಾಗಿದ್ದು, ಮಹಿಳೆಯರು ಎಂದರೆ 'ದುಡಿಯುವ ಮಹಿಳೆಯರು' ಎಂದೇ ಅರ್ಥೈಸಿಕೊಳ್ಳುವಂತೆ ಆಗಬೇಕು. ಮನೆಯಲ್ಲಿನ ದುಡಿಮೆಗೆ ಬೆಲೆ ಬರಬೇಕು, ಹೊರಗಿನ ದುಡಿಮೆಗೆ ದೌರ್ಜನ್ಯದಿಂದಾಗಿ ಮಾತ್ರವೇ ಬೆಲೆ ದೊರಕಿದೆ. ಕಾನೂನು, ಸಮಾಜ, ರಾಜಕೀಯ ಎಲ್ಲ ಕಡೆಯೂ ಮಹಿಳಾ ದೃಷ್ಟಿಕೋನ ಬರಬೇಕಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಸ್ಟರ್ ಸೀಲಿಯಾ ಅವರು ಮಾತನಾಡಿ, ನಾವು ಅಬಲೆಯರಲ್ಲ.. ಸಬಲೆಯರು..ಅಸಂಘಟಿತರಲ್ಲ..ಆಗೋಣ ಸಂಘಟಿತರು.. ಎಂದು ಕರೆ ಕೊಟ್ಟರು.

ಒಟ್ಟಾರೆಯಾಗಿ ಅಂತಾರಾಷ್ಟ್ರೀಯ ದುಡಿಯುವ ಮಹಿಳ ಶತಮಾನೋತ್ಸವವನ್ನು ಮುನ್ನಡೆಯು, ಮಹಿಳಾ ಹೋರಾಟ ಒಕ್ಕೂಟದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ❑



Scanned with OKEN Scanner

# ಗಾರ್ಮೆಂಟ್ಸ್ ಉದ್ಯಮದಲ್ಲಿ ಕನಿಷ್ಠ ವೇತನ ಪರಿಷ್ಕರಣೆ: ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಹಾಗೂ ಮುನ್ನಡೆ ಸಂಘಟನೆಗಳ ಪ್ರಯತ್ನಗಳು




ಕಳೆದ 7 ವರ್ಷಗಳಿಂದ ಗಾರ್ಮೆಂಟ್ಸ್ ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಿರುವ ಮುನ್ನಡೆ ಹಾಗೂ **GATWU** ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠ ವೇತನ ಹೆಚ್ಚಾಗಬೇಕೆಂದು ಹಲವಾರು ಪ್ರಯತ್ನಗಳನ್ನು ಮಾಡುತ್ತಲೇ ಬಂದಿದೆ. ಸರ್ಕಾರಕ್ಕೆ ಈ ಬಗ್ಗೆ ಹಲವಾರು ಬಾರಿ ಮನವಿ ಪತ್ರ ಸಲ್ಲಿಸಿ, ಬೃಹತ್ ಕಾರ್ಮಿಕರ ಮೆರವಣಿಗೆಗಳನ್ನು ಆಯೋಜಿಸಿ, ಸರ್ಕಾರದ ಗಮನ ಈ ಬಗ್ಗೆ ಸೆಳೆಯುವಂತೆ ಮಾಡಿದೆ.

## ಕನಿಷ್ಠ ವೇತನ ಕಾನೂನು ಏನು ಹೇಳುತ್ತದೆ?

'ಸರ್ಕಾರ ನಿಗದಿಪಡಿಸಿದಷ್ಟು ಕನಿಷ್ಠ ವೇತನ ನೀಡಲು ಸಾಧ್ಯವಾಗದಿದ್ದರೆ, ಅಂತಹ ಕಾರ್ಖಾನೆಗಳು ಮುಚ್ಚುವುದೇ ಒಳ್ಳೆಯದು' ಎಂಬ ಅರ್ಥ ಬರುವಂತೆ ಸುಪ್ರೀಂ ಕೋರ್ಟ್‌ನ ಒಂದು ತೀರ್ಪಿನಲ್ಲಿ ಹೇಳಲಾಗಿದೆ. ನಿಗದಿ ಪಡಿಸಿದಷ್ಟು ಕನಿಷ್ಠ ವೇತನವನ್ನು ಕೊಡದಿರುವುದು ಕಾರ್ಮಿಕರ ಶೋಷಣೆಯ ಪರಮಾವಧಿಯಾಗುತ್ತದೆ. ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ. ಯಾವುದೇ ಒಂದು ಉದ್ಯಮಕ್ಕೆ ಸರ್ಕಾರ ನಿಗದಿ ಪಡಿಸುವ ವೇತನ ಕನಿಷ್ಠವಾಗಿದ್ದು, ಅದನ್ನು ಕಡ್ಡಾಯವಾಗಿ ಕೊಡಲೇಬೇಕೆಂದು ಕಾನೂನು ಹೇಳುತ್ತದೆ.

ಸರ್ಕಾರ ಗುರುತಿಸಿರುವ ಪ್ರತಿಯೊಂದು ಉದ್ಯಮಕ್ಕೂ ಪ್ರತಿ ಐದು ವರ್ಷಕ್ಕೊಮ್ಮೆ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕು. ಕಾರ್ಮಿಕ ಇಲಾಖೆಯಲ್ಲಿರುವ ಕನಿಷ್ಠ ವೇತನ ವಿಭಾಗವು ನಿಗದಿ ಪಡಿಸುವ ಕನಿಷ್ಠವೇತನ (ಡ್ರಾಫ್ಟ್ ನೋಟಿಫಿಕೇಶನ್)ದ ಬಗ್ಗೆ ಚರ್ಚಿಸಲು ಹಾಗೂ ಅದರ ಬಗ್ಗೆ ಸಲಹೆ ನೀಡಲು "ಕನಿಷ್ಠ ವೇತನ ಪರಿಷ್ಕರಣಾ ಸಲಹಾ ಮಂಡಳಿ"ಯೊಂದು ರಚನೆಯಾಗುತ್ತದೆ. ಈ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿಗಳು, ಮಾಲೀಕರ ಪ್ರತಿನಿಧಿಗಳು, ಹಾಗೂ ಕಾರ್ಮಿಕರ ಪ್ರತಿನಿಧಿಗಳು ಇರುತ್ತಾರೆ. ಮಂಡಳಿಯು ಕಾಲಕಾಲಕ್ಕೆ ಸಭೆಗಳನ್ನು ಸೇರಿ ಕನಿಷ್ಠ ವೇತನ ಪರಿಷ್ಕರಣೆಯ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡುತ್ತದೆ. ಮಂಡಳಿಯ ಸಲಹೆಯ ಆಧಾರದ ಮೇರೆಗೆ ಸರ್ಕಾರವು ಅಂತಿಮವಾಗಿ ಕನಿಷ್ಠ ವೇತನವನ್ನು ನಿಗದಿಪಡಿಸಿ ಆದೇಶವನ್ನಾಗಿ ಹೊರಡಿಸಲಾಗುತ್ತದೆ.

## ಈಗ ನಡೆಯುತ್ತಿರುವುದೇನು?

ಕಳೆದ 30 ವರ್ಷಗಳ ಗಾರ್ಮೆಂಟ್ಸ್ ಉದ್ಯಮದ ಹಿನ್ನೆಲೆ ಗಮನಿಸಿದರೆ ಈ ಉದ್ಯಮದಲ್ಲಿ ಐದು ವರ್ಷಕ್ಕೊಮ್ಮೆ ಕಾನೂನು ಪ್ರಕಾರ ಆಗಬೇಕಾದ ವೇತನ ಪರಿಷ್ಕರಣೆ ಆಗಿಯೇ ಇಲ್ಲ. ಪ್ರತಿ 8-9 ವರ್ಷಗಳಿಗೊಮ್ಮೆ ಈ ವೇತನವನ್ನು ಪರಿಷ್ಕರಿಸಲಾಗಿದೆ.

## ಕಾರ್ಮಿಕರ ಅಗತ್ಯವೇನು?

ಈ ಕನಿಷ್ಠ ವೇತನವನ್ನು ನಿಗದಿ ಪಡಿಸಲು ಇಲ್ಲಿಯವರೆಗೂ ಯಾವುದೇ ವೈಜ್ಞಾನಿಕ ಆಧಾರವನ್ನು ಅಳವಡಿಸಿಕೊಂಡು ಮಾಡಲಾಗುತ್ತಿಲ್ಲ.

ಬೆಂಗಳೂರು ಮಹಾನಗರದಲ್ಲಿ ನಾಲ್ಕು ಜನರಿರುವ ಒಂದು ಕುಟುಂಬವು ಸಾಧಾರಣ ಮಟ್ಟದ ಜೀವನ ನಡೆಸಲು ಎಷ್ಟು ಹಣ ಬೇಕಾಗುತ್ತದೆ? ಹಾಗೂ ಅವರ ಅವಶ್ಯಕತೆಗಳನ್ನು ಕುರಿತು ಯೂನಿಯನ್ 2007ರಲ್ಲಿ 100 ಗಾರ್ಮೆಂಟ್ಸ್ ಕಾರ್ಮಿಕರ ವಿವರಗಳನ್ನು ಸಂಗ್ರಹಿಸಿತ್ತು. ಅದನ್ನು ವಿಶ್ಲೇಷಿಸಿದ ಬಳಿಕ ಆಗ ತಿಳಿದ ಅಂಶವೆಂದರೆ ಬೆಂಗಳೂರಿನಲ್ಲಿ ಮನೆ ಬಾಡಿಗೆ, ಊಟ, ಬಟ್ಟೆ, ಮಕ್ಕಳ ವಿದ್ಯಾಭ್ಯಾಸ, ಓಡಾಟದ ಖರ್ಚು, ಆರೋಗ್ಯ, ಇವುಗಳಿಗೆ ಒಂದು ಕುಟುಂಬಕ್ಕೆ ತಿಂಗಳಿಗೆ ಸುಮಾರು 10 ಸಾವಿರ ರೂ. ಬೇಕು ಎಂದು ತಿಳಿದು ಬಂದಿತು. ಆ ಸಮಯದಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ದೊರೆಯುತ್ತಿದ್ದ ಕನಿಷ್ಠ ವೇತನ 101 ರೂ.ಗಳು.

ಆದರೆ ಈಗಲೂ ಗಾರ್ಮೆಂಟ್ಸ್ ಉದ್ಯಮಕ್ಕೆ ನಿಗದಿ ಪಡಿಸಿದ ವೇತನ ರೂ 3800 ಅಷ್ಟೇ.

ಈ ಬಗ್ಗೆ ಸರ್ಕಾರದ ಹಾಗೂ ಎಲ್ಲರ ಗಮನ ಸೆಳೆಯಲು ಮುನ್ನಡೆ ಹಾಗೂ ಗಾಟು 'ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನಕ್ಕೆ ಕನಿಷ್ಠ 200 ರೂ.ಗಳು ಬೇಕು ಎಂದು ಆಗ್ರಹಿಸಿ 'ಕನಿಷ್ಠ ವೇತನ ಆಂದೋಲನ–2007' ರನ್ನು ನಡೆಸಿತು. ಕಾರ್ಮಿಕರ ಮನೆ ಮನೆಗೂ ಹೋಗಿ ಅವರ ಪರಿಸ್ಥಿತಿ ತಿಳಿದು, 200 ರೂ.ಗಳು ಅವರಿಗೆಷ್ಟು ಅಗತ್ಯ ವೆನ್ನುವ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಮಿಕರ ಬೃಹತ್ ಮೆರವಣಿಗೆಯನ್ನು ಆಯೋಜಿಸಲಾಯಿತು. ಕಾರ್ಮಿಕ ಮಂತ್ರಿಗಳಿಗೆ ಮನವಿ ಪತ್ರ ನೀಡಲಾಯಿತು.

## ಪ್ರಸ್ತುತ ಪರಿಸ್ಥಿತಿ ಏನು?

8 ವರ್ಷಗಳ ನಂತರ 2009 ರ ಮಾರ್ಚ್‌ನಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ವೇತನ ಪರಿಷ್ಕರಣೆ ಆಗಿ, (ಅಂಕಿ ಸಂಖ್ಯೆಗಳನ್ನು ಬಾಕ್ಸ್‌ನಲ್ಲಿ ನೀಡಲಾಗಿದೆ) 2009 ರ ತುಟ್ಟಿಭತ್ಯೆಯನ್ನೂ ಸೇರಿ ಕುಶಲವಲ್ಲದ ಕಾರ್ಮಿಕರಿಗೆ ದಿನಕ್ಕೆ 127 ರೂ. ಎಂದು ನಿಗದಿ ಪಡಿಸಲಾಗಿತ್ತು.

ಆದರೆ ಹೆಚ್ಚಿಸಿದ ಕನಿಷ್ಠ ವೇತನವನ್ನು ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು ಜಾರಿಗೊಳಿಸದೇ ಸರ್ಕಾರದ ಆದೇಶವನ್ನು ಧಿಕ್ಕರಿಸಿದ್ದಾರೆ. ಕಾರ್ಖಾನೆಗಳು ಸರ್ಕಾರದ ಆದೇಶವನ್ನೇ ಉಲ್ಲಂಘಿಸುತ್ತಿರುವ ಬಗ್ಗೆ ಯೂನಿಯನ್ ಹಲವಾರು ಬಾರಿ, ಕಾರ್ಮಿಕ ಆಯುಕ್ತರಿಗೆ ಹಾಗೂ 12 ಪ್ರಮುಖ ಮಾಲೀಕರಿಗೆ ಆಗಿಂದಾಗ್ಗೆ ಪತ್ರ ನೀಡುತ್ತಲೇ ಬಂತು. ಜೊತೆಗೆ ಕಾರ್ಮಿಕ ಮಂತ್ರಿಗಳಿಗೆ ಈ ಬಗ್ಗೆ ಮನವಿ ಪತ್ರವನ್ನೂ ನೀಡಿತ್ತು.

ಹಲವಾರು ಬಾರಿ ಪತ್ರ ಬರೆದರೂ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆಯೂ ಬರಲಿಲ್ಲ, ಕಾರ್ಮಿಕರಿಗೆ ವೇತನವೂ ಜಾರಿಯಾಗಲಿಲ್ಲ. ನಂತರ ನ್ಯಾಯಾಂಗದ ಮೊರೆ ಹೋಗಬೇಕಾಯಿತು. ಸರ್ಕಾರದ ಆದೇಶವನ್ನು ಜಾರಿಗೊಳಿಸಲು ಆದೇಶಿಸಬೇಕೆಂದು ಯೂನಿಯನ್ ದಿನಾಂಕ 8.3.2010 ರಂದು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿತು. ಈ



Scanned with OKEN Scanner

ಮನವಿಯನ್ನು ಪುರಸ್ಕರಿಸಿ, ನ್ಯಾಯಾಲಯವು ಸರ್ಕಾರಕ್ಕೆ ಹಾಗೂ 11 ಪ್ರಮುಖ ಮಾಲೀಕರಿಗೆ ನೋಟೀಸ್ ಜಾರಿ ಮಾಡಲು ಆದೇಶಿಸಿತು.



ಆಶ್ಚರ್ಯಕರ ಸಂಗತಿ ಎಂದರೆ, ಈ ನೋಟೀಸ್ ನೀಡಿದ ನಂತರ ಸರ್ಕಾರದ ತನ್ನ ಕನಿಷ್ಠವೇತನ ಆದೇಶವನ್ನೇ ರದ್ದುಗೊಳಿಸಿ, ದಿನಾಂಕ 30.3.2010 ರಂದು ಹೊಸ ಆದೇಶವನ್ನು ಹೊರಡಿಸಿತು. ಇದಕ್ಕೆ ನೀಡಿರುವ ಕಾರಣವೆಂದರೆ, ತನ್ನ 2009ರ ಆದೇಶದಲ್ಲಿ ಬೆರಳಚ್ಚು ಮಾಡುವಾಗ ತಪ್ಪಾಗಿದೆಯೆಂದು ನಮೂದಿಸಿ, ರೂ. 127 ಕ್ಕೆ ಏರಿಸಿದ್ದ ಕನಿಷ್ಠ ವೇತನವನ್ನು ರೂ. 121 ಕ್ಕೆ ಇಳಿಸಿತು.

ಸರ್ಕಾರದ ಈ ಧಿಡೀರ್ ನಿರ್ಧಾರಕ್ಕೆ ಏನು ಕಾರಣವೋ ತಿಳಿಯದು. 2009ರ ಆದೇಶವನ್ನು ಟೈಪ್ ಮಾಡುವಾಗ ತಪ್ಪಾಗಿದೆಯೆಂದು ತಿಳಿಯಲು ಒಂದು ವರ್ಷದ ಅವಧಿ ಬೇಕಾಯಿತೇ? ಅಥವಾ ಯಾವ, ಯಾರ ಪ್ರಭಾವಕ್ಕೆ ಒಳಗಾಗಿ ಈ ಬದಲಾವಣೆ ಮಾಡಿತೋ ತಿಳಿಯದು. ಸರ್ಕಾರವು ಹೆಚ್ಚಿಸಿದ ಕನಿಷ್ಠ ವೇತನವನ್ನು ಕಡಿಮೆಗೊಳಿಸುತ್ತಿರುವುದು ಇದೇ ಮೊದಲ ಬಾರಿಯಲ್ಲ. ಕಳೆದ ಮೂವತ್ತು ವರ್ಷಗಳಲ್ಲಿ ಎಷ್ಟು ಬಾರಿ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆಯೋ ಅಷ್ಟೂ ಬಾರಿ ಮಾಲೀಕ ವರ್ಗದವರು ಅದನ್ನು ಕಡಿಮೆ ಮಾಡಿಸಿದ ಇತಿಹಾಸವಿದೆ. ಆದರೆ, ಸರ್ಕಾರವೇ, ತನ್ನ ತಪ್ಪು ಎಂದು ಹೇಳೀ ತನ್ನ ಆದೇಶವನ್ನು ಬದಲಿಸಿರುವುದು ಇದು ಎರಡನೇ ಬಾರಿಯಾಗಿದೆ. (2001ರಲ್ಲೂ ಸಹ, ಸರ್ಕಾರ ರೂ. ರೂ. 78 ರಿಂದ 71 ಕ್ಕೆ ಇಳಿಸಲಾಗುತ್ತು. ಅಲ್ಲಿ ನೀಡಿದ್ದ ಕಾರಣ ಅಧಿಸೂಚನೆಯಲ್ಲಿ ಕಂಡು ಬಂದ ಕೆಲವು ಲೋಪದೋಷ!!!!!!) ಈ ರೀತಿ ತನ್ನ ತಪ್ಪಿದೆಯೆಂದು ಒಂದು ವರ್ಷದ ನಂತರ ಎಚ್ಚೆತ್ತುಕೊಂಡು ಕಡಿಮೆಮಾಡಿರುವುದು ಇದೇ ಮೊದಲ ಬಾರಿಯಾಗಿದೆ.

ಈ ಕನಿಷ್ಠ ವೇತನದ ಆದೇಶವನ್ನು ಹೊರಡಿಸುವಾಗ, ಸರ್ಕಾರದ ಹಿರಿಯ ಅಧಿಕಾರಿಗಳ ಕಣ್ತಪ್ಪಿಸಿ ಈ ಲೋಪದೋಷಗಳು ಹಾಗೂ ಬೆರಳಚ್ಚು ತಪ್ಪುಗಳು ಆಗಲು ಹೇಗೆ ಸಾಧ್ಯ?

ಗಾರ್ಮೆಂಟ್ ಅಂಡ್ ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್, ದಿನಾಂಕ 23-04-2010 ರಂದು, ಸರ್ಕಾರದ ಈ ಹೊಸ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದೆ. ಕನಿಷ್ಠ ವೇತನ ಕಡಿಮೆಗೊಳಿಸಿ ಹೊರಡಿಸಿರುವ ಹೊಸ ಆದೇಶ ರದ್ದುಗೊಳಿಸಿ, ಮೊದಲಿನ 2009ರ ಆದೇಶದಂತೆ, ಕಾರ್ಮಿಕರಿಗೆ ವೇತನ ಪಾವತಿಸಲು ಆದೇಶಿಸುವಂತೆ ನ್ಯಾಯಾಲಯನ್ನು ಕೋರಿದೆ.

ಸರ್ಕಾರ ಕನಿಷ್ಠ ವೇತನವನ್ನು ಕಡಿಮೆಗೊಳಿಸಿ ಹೊಸ ಆದೇಶವನ್ನು ಹೊರಡಿಸಿದ ನಂತರ, ಕಳೆದ ಮೇ ತಿಂಗಳಿಂದ ಬೆಂಗಳೂರಿನ ಹಲವಾರು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕುಶಲವಲ್ಲದ ಕಾರ್ಮಿಕರಿಗೆ (ಹೆಲ್ಪರ್ ವರ್ಗಕ್ಕೆ) ರೂ. 121 ಕನಿಷ್ಠ ವೇತನವನ್ನು ನೀಡಲಾಗುತ್ತಿದೆ. ಆದರೆ 2010ರ ಏಪ್ರಿಲ್‌ನಿಂದ ನಿಗದಿಯಾದ ಡಿ.ಎ.ಯನ್ನು ಇನ್ನೂ ನೀಡಿಲ್ಲ.

❐

**ಗಾರ್ಮೆಂಟ್ಸ್ ಉದ್ಯಮದಲ್ಲಿ ಹೆಲ್ಪರ್ ವರ್ಗಕ್ಕೆ ನಿಗದಿಪಡಿಸಿದ ಕನಿಷ್ಠ ವೇತನದ ವಿವರಗಳು (10 ವರ್ಷಗಳ ಅವಧಿಯಲ್ಲಿ)**

| ವರ್ಷ | ಮೂಲವೇತನ | ತುಟ್ಟಿಭತ್ಯೆ (ಡಿ.ಎ) ಏಪ್ರಿಲ್ 1ರ ನಂತರ | ಒಟ್ಟು |
|---|---|---|---|
| 2001 | 71.70 | - | 71.70 |
| 2008 | 71.70 | 30.00 | 101.70 |
| 2009 | 88.90 (ಜಾರಿಗೊಳಿಸಿಲ್ಲ) | 38.10 | 127.00 |
| 2010 | 88.90 | 57.30 | 146.20 |
| ಸರ್ಕಾರದ ಹೊಸ ಆದೇಶದ ಪ್ರಕಾರ ಪ್ರಸ್ತುತ ವೇತನ (2009 ಏಪ್ರಿಲ್‌ನಿಂದ ರಿಂದ ಜಾರಿಗೆ ಬರುವಂತೆ) | | | |
| 2010 | 106.80 | 34.52 | 141.32 |

## ಸುದ್ದಿ ಚಿತ್ರ

ಬೆಂಗಳೂರು ಮಹಾ ನಗರ ಪಾಲಿಕೆಯ ಚುನಾವಣೆಗಳು ಮುಗಿದು ಚುನಾಯಿತ ಪ್ರತಿನಿಧಿಗಳು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ವಾಸಿಸುವ ನಾಯಂಡಹಳ್ಳಿ, ಬ್ಯಾಟರಾಯನಪುರ ಹಾಗೂ ಕಸ್ತೂರಬಾ ನಗರ, ಈ ಸ್ಥಳಗಳ ಕಾರ್ಪೋರೇಟರ್‌ಗಳನ್ನು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಪ್ರತಿನಿಧಿಗಳು ಭೇಟಿ ಮಾಡಿದ್ದರು.

ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳ ಕುರಿತು ಅವರ ಗಮನ ಸೆಳೆಯುವುದು ಹಾಗೂ ಸಂಘಟನೆಯ ಪರಿಚಯ ಮಾಡಿಕೊಡುವುದು ಈ ಭೇಟಿಯ ಉದ್ದೇಶವಾಗಿತ್ತು.



ನಾಯಂಡಹಳ್ಳಿಯ ಕಾರ್ಪೋರೇಟರ್ ಆದ ಶ್ರೀಮತಿ ರಾಜೇಶ್ವರಿ ಅವರೊಂದಿಗೆ ಮುನ್ನಡೆಯ ಪ್ರತಿನಿಧಿಗಳು



Scanned with OKEN Scanner

# ಹುಟ್ಟುಹಬ್ಬದ ಶುಭಾಶಯಗಳು



ಮನೋಜ್
ದಿನಾಂಕ: 17.05.1993
ತಾಯಿ: ಮಾಲ
ಕಾರ್ಖಾನೆ: ಅರವಿಂದ್



ಕೀರ್ತನ
ದಿನಾಂಕ: 27.05.1998
ತಾಯಿ: ಸುನೀತಾ
ತಂದೆ: ಸಿದ್ಧರಾಜು



ವರುಣ್ : 17.5.2003
ಸ್ನೇಹ : 16.5.2005
ತಾಯಿ: ಭಾರತಿ
ಕಾರ್ಖಾನೆ: ದೇವಕಿ ಡಿಸೈನ್ಸ್
ತಂದೆ: ಸುರೇಶ್

**2009–2010 ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳು ಹಾಗೂ ನಾಯಂಡ ಹಳ್ಳಿ ಲೈಬ್ರರಿಯ ಮಕ್ಕಳಿಗೆ 'ಮುನ್ನಡೆ' ಅಭಿನಂದನೆ ಸಲ್ಲಿಸುತ್ತಿದೆ.**



ಲಕ್ಷ್ಮೀದೇವಿ
S.S.L.C - 90 %
ತಾಯಿ: ಕಮಲಮ್ಮ



ದೇವರಾಜು
S.S.L.C - 67 %
ತಾಯಿ: ರೇಣುಕಮ್ಮ
ತಂದೆ: ನಾಗರಾಜು



ಬಸವ ರಾಜು
S.S.L.C - 66 %
ತಾಯಿ: ರೇಣುಕ
ತಂದೆ: ರವಿಕುಮಾರ್



ರಂಜಿತ
S.S.L.C - 64 %
ತಾಯಿ: ಮಣಿ ಕಾರ್ಖಾನೆ:
ವಿನಾಯಕ ಕ್ರಿಯೇಶನ್
ತಂದೆ: ನಾಗರಾಜು



ಚಂದ್ರಿಕಾ
S.S.L.C - 56 %
ತಾಯಿ: ಸುಜಾತ, ಕಾರ್ಖಾನೆ:
ವಿ.ಕೆ.ಎನ್ ಎಕ್ಸ್‌ಪೋರ್ಟ್ಸ್
ತಂದೆ: ದೇವರಾಜ್



ಪವಿತ್ರಾ
'ಮುನ್ನಡೆ'
2nd P.U.C- 54 %
ತಾಯಿ: ರಾಜಮ್ಮ
ತಂದೆ: ಮಹಾದೇವ ನಾಯಕ್

### ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ನಾಯಂಡಹಳ್ಳಿ ಮುನ್ನಡೆ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.
ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಗ್ಗೆ 10ರಿಂದ 2ರ ವರೆಗೆ

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ.8/3, ಶ್ರೀಮಾತಾ ನಿಲಯ, ನ್ಯೂಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–29. ದೂ.: 26751320

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ.35, ಮುತ್ತಯ್ಯ ಕಾಂಪೌಂಡ್ ನಾಯಂಡಹಳ್ಳಿ ಮೈಸೂರು ರಸ್ತೆ, ಬೆಂಗಳೂರು – 39.

ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ, ಸಂಪಂಗಿರಾಮನಗರ
   ಬೆಂಗಳೂರು – 560 027.

   **ಪೀಣ್ಯ ಶಾಖೆ**
   ನಂ. 91, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ
   3ನೇ ಫೇಸ್, ಗಣಪತಿನಗರ, ಪೀಣ್ಯ,
   ಬೆಂಗಳೂರು–56, ದೂ: 28364679
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು–560009 ದೂ.: 22216485
3. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂ: 1091, ದೂ.: 22943225
4. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–38 ದೂ.: 25492781
5. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು–27

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ–560026. ದೂ. : 2675 1320
ಪ್ರಕಾಶಕರು : ಸಿವಿಡೆಸ್–ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner